ಅಸಲು ದಾವೆ ಸಂಃ 65/2023

ಪಿ.ಡಬ್ಲ್ಯೂಃ1

ಈ ದಿನ ದಿನಾಂಕಃ 25-11-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ</u>**

ನಾನು ಸಿರಿಗೆರೆ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕನಾಗಿ ನಿವೃತ್ತಿ ಹೊಂದಿರುತ್ತೇನೆ ಎಂದರೆ ಸರಿ. 1993ನೇ ಸಾಲಿನಲ್ಲಿ ನಾನು ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿರುತ್ತೇನೆ. ಪ್ರತಿವಾದಿ ನನ್ನ ಶಿಕ್ಷಣದ ಖರ್ಚು ವೆಚ್ಚವನ್ನು ಭರಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಮೂಲತಃ ಚಿಕ್ಕಮಳಲಿ ಗ್ರಾಮದವರು ಎಂದರೆ ಸರಿ. ಚಿಕ್ಕ ಮಳಲಿ ಗ್ರಾಮದಲ್ಲಿ ಸಾಂಕ್ರಾಮಿಕ ರೋಗ ಹರಡಿದ್ದರಿಂದ ಹಿರೇಮಳಲಿ ಗ್ರಾಮಕ್ಕೆ ವಲಸ್ಸೆ ಹೊರಡುತ್ತೇವೆ ಎಂದರೆ ನನ್ನ ತಂದೆ ಕಾಲಕ್ಕೆ ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 04-05-1989 ರ ನಿಪಿ-1 ರಲ್ಲಿರುವ ಪಾಲು ವಿಭಾಗ ಪತ್ರ ಮಾಡಿಕೊಳ್ಳುವ ಕಾಲಕ್ಕೆ ನಾನು ನಿರುದ್ಯೋಗಿ ಹಾಗೂ ಅವಿವಾಹಿತ ಎಂದರೆ ಸರಿ. ನನ್ನ ಕೆಲಸವನ್ನು ಅಣ್ಣ ರೆಕ್ ಮೆಂಡ್ ಮಾಡಿ ಕೊಡಿಸಿರುತ್ತಾರೆ. ನನ್ನ ತಂದೆಗೆ ಒಟ್ಟು 05 ಜನ ಮಕ್ಕಳು ಎಂದರೆ ಸರಿ. ದ್ರಾಕ್ಷಾಯಣಮ್ಮ ನನ್ನ ಸಹೋದರಿ ಎಂದರೆ ಸರಿ. ನನ್ನ ತಂದೆ ರುದ್ರಯ್ಯನವರ 5 ಜನ ಮಕ್ಕಳ ಪೈಕಿ ಮೊದಲನೆ ಜಯ್ಯಪ್ಪ, 2ನೇ ಶಿವಮೂರ್ತಿ, 3ನೇ ಪರಮೇಶ್ವರಯ್ಯ, 4ನೇ ದ್ರಾಕ್ಷಾಯಣಮ್ಮ ಹಾಗೂ 5ನೇಯವ ನಾನು ಎಂದರೆ ಸರಿ. ನಿಪಿ-1 ರಲ್ಲಿರುವ ಪಾಲು ವಿಭಾಗ ಪತ್ರದ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-1 ರಲ್ಲಿ ನಮೂದಿಸಿರುವ ಸಂಗತಿಗಳು ಸತ್ಯವಾಗಿವೆ ಎಂದರೆ ಸರಿ. ನಿಪಿ-1 ರಂತೆ ನನ್ನ ದೊಡ್ಡಣ್ಣ ಜಯ್ಯಪ್ಪನಿಗೆ ತಿಮ್ಲಾಪುರ ಗ್ರಾಮದ ಸರ್ವೆ ನಂಃ 35 ರಲ್ಲಿ 16 ಗುಂಟೆ ಖರಾಬು ಸಹಿತ 5 ಎಕರೆ 20 ಗುಂಟೆ ಜಮೀನು ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ಜಯ್ಯಪ್ಪನಿಗೆ ಚಿಕ್ಕಮಳಲಿ ಗ್ರಾಮದ ಆಸ್ತಿಯಲ್ಲಿ ಯಾವುದೇ ಪಾಲು ಬಂದಿರುವುದಿಲ್ಲ ಎಂದರೆ ಸರಿ. ಚಿಕ್ಕ ಮಳಲಿ ಗ್ರಾಮದ ಆಸ್ತಿಯ ಒಟ್ಟು ವಿಸ್ತೀರ್ ಣ 23 ಎಕರೆ, 31 ಗುಂಟೆ ಎಂದರೆ ಸರಿ. ಸದರಿ

ಜಮೀನಿನಲ್ಲಿ 26 ಗುಂಟೆ ಖರಾಬು ಇದೆ ಎಂದರೆ ಸರಿ. ಸದರಿ 23 ಎಕರೆ 31 ಗುಂಟೆ ಜಮೀನು ಮುದಿಗೆರೆ ಯಿಂದ ಹಿರೇ ಮಳಲಿ ಗ್ರಾಮಕ್ಕೆ ಹೋಗುವ ರಸ್ತೆಯ ಇಕ್ಕೆಲಗಳಲ್ಲಿ ಅಸ್ತಿತ್ವದಲ್ಲಿದೆ ಎಂದರೆ ಸರಿ. ಸದರಿ ಮುದಿಗೆರೆ ಯಿಂದ ಹಿರೇ ಮಳಲಿ ಗ್ರಾಮಕ್ಕೆ ಹೋಗುವ ರಸ್ತೆಯ ಉತ್ತರ ಭಾಗದಿಂದ ಆಸ್ತಿಯನ್ನು ಪಾಲು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಪಾಲು ವಿಭಾಗದಲ್ಲಿ ಉತ್ತರ ದಿಕ್ಕಿನ ಆಸ್ತಿಯನ್ನು ನನ್ನ ತಂದೆಯ ಪಾಲಿಗೆ ನೀಡಿರುತ್ತೇವೆ ಎಂದರೆ ಸರಿ. ಸದರಿ ಪಾಲು ವಿಭಾಗದಲ್ಲಿ ನನ್ನ ತಂದೆಯ ಪಾಲಿಗೆ ನೀಡಿದ ಆಸ್ತಿಯ ವಿಸ್ತೀರ್ಣ 04 ಎಕರೆ ಪಾಲು ವಿಭಾಗ ಆದ ದಿನದಿಂದ ನನ್ನ ತಂದೆ ಸ್ವಾಧೀನದಲ್ಲಿದ್ದರು ಎಂದರೆ ಸರಿ. ಸದರಿ ಜಮೀನನ್ನು ನನ್ನ ತಂದೆ ಆರ್ ಟಿ ಓ ಕಛೇರಿಯಲ್ಲಿ ಕೆಲಸ ಮಾಡುವ ವ್ಯಕ್ತಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

ನಿಪಿ-1 ರಂತೆ ಪರಮೇಶ್ವರಯ್ಯನಿಗೆ 07 ಎಕರೆ ಜಮೀನನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 07 ಎಕೆರೆ, 06 ಗುಂಟೆ ಜಮೀನನ್ನು ನೀಡಿರುತ್ತಾರೆ ಎಂದರು ನುಡಿಯುತ್ತಾರೆ. ನಿಪಿ-1ರಲ್ಲಿ ಪರಮೇಶ್ವರಯ್ಯನಿಗೆ 07 ಎಕರೆ ಜಮೀನನ್ನು ನೀಡಿರುವುದಾಗಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಕುಟುಂಬದ ಕಿರಿಯನಾದ್ದರಿಂದ ನಿಪಿ-1 ರಲ್ಲಿ 07 ಎಕರೆ 11 ಗುಂಟೆ ಜಮೀನನ್ನು ನನ್ನ ಪಾಲಿಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ಜಮೀನು ಮುದಿಗೆರೆ ಯಿಂದ ಹಿರೇಮಳಲಿ ಗ್ರಾಮಕ್ಕೆ ಹೋಗುವ ರಸ್ತೆಯ ಇಕ್ಕೆಲಗಳಲ್ಲಿ ಇದೆ ಎಂದರೆ ಸರಿ. ನನ್ನ ತಂದೆ, ಪರಮೇಶ್ವರಯ್ಯ ಹಾಗೂ ನಮ್ಮಗಳ ಪಾಲಿಗೆ ಬಂದ ಜಮೀನು ಸಮತಟ್ಟಾದ ಪ್ರದೇಶ ಹಾಗೂ ಫಲವತ್ತಾದ ಭೂಮಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸಮತಟ್ಟಾಗಿರುವುದಿಲ್ಲ ಆದರೆ ಫಲವತ್ತಾದ ಭೂಮಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಮುದಿಗೆರೆ ಯಿಂದ ಹಿರೇಮಳಲಿ ಗ್ರಾಮಕ್ಕೆ ಹೋಗುವ ರಸ್ತೆಯ ಉತ್ತರ ದಿಕ್ಕಿನಲ್ಲಿ ನನ್ನ ತಂದೆ, ಪರಮೇಶ್ವರಪ್ಪ ಹಾಗೂ ನನ್ನ ಪಾಲಿಗೆ ಬಂದ ಆಸ್ತಿಯ ಬದುವಿನಲ್ಲಿ ತಿಮ್ಲಾಪುರ ಗ್ರಾಮಕ್ಕೆ ಹೋಗಲು ರಸ್ತೆ ಇದೆ ಎಂದರೆ ಸಾಕ್ಷಿಯು ತಿಮ್ಲಾಪುರ ಗ್ರಾಮಕ್ಕೆ ಹೋಗುವ ರಸ್ತೆ ನನ್ನ ಅಣ್ಣ ಪರಮೇಶ್ವರಯ್ಯನ 07 ಎಕರೆ 06 ಗುಂಟೆ ಜಮೀನಿನ ಪೈಕಿ 06 ಗುಂಟೆಯಲ್ಲಿ ರಸ್ತೆ ಇರುತ್ತದೆ, ನನ್ನ ತಂದೆಯ ಅಸ್ತಿಯಲ್ಲಿ ಕಾಲುದಾರಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.